O/C

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಒಒಎಸ್‌ಸಿ/ಕಟ್ಟಡ ಕಾರ್ಮಿಕರು/11-12/12-13 ದಿನಾಂಕ: 17.04.2013

ಜಂಟಿ ಆಯುಕ್ತರು,
ಕಾರ್ಮಿಕ ಇಲಾಖೆ,
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಡೈರಿ ವೃತ್ತ,
ಬೆಂಗಳೂರು–27.

ಮಾನ್ಯರೆ,

ವಿಷಯ: ಶಾಲೆಯಿಂದ ಹೊರಗುಳಿದ ಬಾಲಕಾರ್ಮಿಕ ಮಕ್ಕಳನ್ನು ಸಹ ತಮ್ಮ ಕಾರ್ಮಿಕ ಇಲಾಖೆ ವತಿಯಿಂದ ನಡೆಸುತ್ತಿರುವ ಶಾಲೆಗಳಿಗೆ ದಾಖಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1) 2013–14ನೇ ಸಾಲಿನ ವಾರ್ಷಿ ಕ್ರಿಯಾ ಯೋಜನೆಯ ಅನುಷ್ಠಾನದ ಬಗ್ಗೆ ದಿನಾಂಕ: 17.04.2013 ರಂದು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಸೂಚಿಸಿರುವಂತೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು, ಸಾರ್ವತ್ರಿಕ ಅವಕಾಶ ಮತ್ತು ಧಾರಣದ ದೃಷ್ಟಿಯಿಂದ ಈ ಬಗ್ಗೆ ವಿಶೇಷ ಗಮನ ನೀಡುವುದು ಅಗತ್ಯವಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಆಯಾ ವರ್ಷದಲ್ಲಿ ಗುರುತಿಸಿದ ನಂತರ, ಆ ಮಕ್ಕಳನ್ನು ಹತ್ತಿರದ ಶಾಲೆಗೆ ಮೊದಲು ನೊಂದಾಯಿಸಿ (Enroll) ವಿಶೇಷ ತರಬೇತಿಗೆ ಒಳಪಡಿಸಿ, ನಂತರ ವಯಸ್ಸಿಗೆ ಸಂವಾದಿಯಾಗಿ (age-appropriate) ನಿರ್ದಿಷ್ಟಪಡಿಸಿದ ತರಗತಿಗೆ ದಾಖಲು ಮಾಡುವುದು (actual admission) ಕಡ್ಡಾಯವಾಗಿದೆ. 2012–13ನೇ ಸಾಲಿನಲ್ಲಿ ತಮ್ಮ ಇಲಾಖೆ ನಡೆಸುತ್ತಿದ್ದ ಎನ್.ಸಿ.ಎಲ್.ಪಿ. ಕೇಂದ್ರದಲ್ಲಿ ಕಲಿಯುತ್ತಿದ್ದ ಪ್ರತಿ ಮಗುವಿಗೆ ವರ್ಷಕ್ಕೆ ರೂ. 6000 ಘಟಕ ವೆಚ್ಚದಂತೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಮಕ್ಕಳ ಸಂಖ್ಯೆಗನುಗುಣವಾಗಿ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿತ್ತು.

2013–14ನೇ ಸಾಲಿಗೆ ಕಾರ್ಮಿಕ ಇಲಾಖೆ ಮತ್ತು ಸರ್ವ ಶಿಕ್ಷಣ ಅಭಿಯಾನ ವತಿಯಿಂದ ಒಟ್ಟು 4421 ಮಕ್ಕಳನ್ನು ಶಾಲೆಯಿಂದ ಹೊರಗುಳಿದ ಬಾಲಕಾರ್ಮಿಕ ಮಕ್ಕಳಿಗೆ ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದ್ದು, ಅದರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ. ಆದರೆ ಕ್ರಿಯಾ ಯೋಜನೆ ರೂಪಿಸಿದ್ದ ಒಟ್ಟು 4421 ಮಕ್ಕಳನ್ನು ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ ಕೇಂದ್ರ ಸರ್ಕಾರದ ಧನಸಹಾಯದಿಂದ ಕಾರ್ಮಿಕ ಇಲಾಖೆಯು ನಡೆಸುತ್ತಿರುವ ಕೇಂದ್ರಗಳಲ್ಲಿ ದಾಖಲಿಸಿ ಅದಕ್ಕೆ ಅಗತ್ಯವಿರುವ ಅನುದಾನವನ್ನು ಕಾರ್ಮಿಕ ಇಲಾಖೆಯಿಂದ ಭರಿಸುವಂತೆ ಉಲ್ಲೇಖದನ್ವಯ ದಿನಾಂಕ: 17.04.2013 ರಂದು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಸೂಚಿಸಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಕೂಡಲೇ ತಮ್ಮ ಜಿಲ್ಲಾ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ಹೊರಡಿಸಿ, ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

ಸರ್ವ ಶಿಕ್ಷಣ ಅಭಿಯಾನ
ಸ್ವೀಕೃತಿ ಸಂ.: 335
ದಿನಾಂಕ: 27/4/2013

ತಮ್ಮ ವಿಶ್ವಾಸಿ

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA

## ಅನುಬಂಧ – 1

| ಕ್ರ ಸಂ. | ಜಿಲ್ಲೆ | ಒಟ್ಟು ಮಕ್ಕಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 1250 |
| 2 | ಬೆಂಗಳೂರು ಗ್ರಾ. | 148 |
| 3 | ಬೆಂಗಳೂರು ಉತ್ತರ | 185 |
| 4 | ಬೆಂಗಳೂರು ದಕ್ಷಿಣ | 431 |
| 5 | ಬಳ್ಳಾರಿ | 292 |
| 6 | ಬಿಜಾಪುರ | 1225 |
| 7 | ಚಿತ್ರದುರ್ಗ | 153 |
| 8 | ದಾವಣಗೆರೆ | 127 |
| 9 | ಯಾದಗಿರಿ | 102 |
| 10 | ಕೊಡಗು | 22 |
| 11 | ಕೊಪ್ಪಳ | 100 |
| 12 | ಮೈಸೂರು | 138 |
| 13 | ರಾಯಚೂರು | 248 |
| | ಒಟ್ಟು | 4421 |

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA